# ಆಹಾ ಸುದ್ದಿ!

★ ಸಸಿತೋಟ



ಜೋಹಾನ್ಸ್‌ಬರ್ಗ್‌ನಲ್ಲಿ ಅಳಿದ ನಾಯಕ ನೆಲ್ಸನ್ ಮಂಡೇಲಾ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಸಭೆಯಲ್ಲಿ ಕಂಡ ದೃಶ್ಯವಿದು. ಅಮೆರಿಕಾದ ಅಧ್ಯಕ್ಷ ಒಬಾಮ, ಇಂಗ್ಲೆಂಡ್ ಪ್ರಧಾನಿ ಕ್ಯಾಮೆರಾನ್ ಹಾಗೂ ಡೆನ್ಮಾರ್ಕ್ ಪ್ರಧಾನಿ ಹೆಲ್ ಥೋರ್ನಿಂಗ್ ಮೊಬೈಲ್ ಕ್ಯಾಮೆರಾದಲ್ಲಿ ಒಟ್ಟಾಗಿ ಫೋಟೊ ತೆಗೆದುಕೊಳ್ಳುವಲ್ಲಿ ನಿರತರಾಗಿದ್ದರು. ಅವರು ಫೋಟೊ ತೆಗೆಸಿಕೊಳ್ಳುವ ಫೋಟೊವನ್ನು ಸುದ್ದಿಸಂಸ್ಥೆ ಸೆರೆ ಹಿಡಿದು ಪ್ರಚಾರ ಕೊಟ್ಟಿತು. ದೇಶದ ನಾಯಕರಾದರೇನು, ಅವರೂ ಮನುಷ್ಯರಲ್ಲವೇ? ಮನುಷ್ಯರಾದರೇನು, ಮಂಗವೇ ಮೂಲವಲ್ಲವೇ?

ಭ್ರಷ್ಟಾಚಾರ, ಲಂಚದ ಆರೋಪದ ಮೇಲೆ ಬಂಧನಕ್ಕೊಳಗಾದ ಇಟಲಿಯ ರಾಜಕಾರಣಿ ಫಾನಿಸ್ ತನ್ನ ಕಾರ್ಯದರ್ಶಿಯ ಜೊತೆ ಮಾಡಿಕೊಂಡ ಒಪ್ಪಂದ ಬಹಿರಂಗಗೊಂಡಿದ್ದು ಅಲ್ಲಿಯ ನಾಗರಿಕರಿಗೆ ನಗಬೇಕೋ, ಅಳಬೇಕೋ ಎಂದು ತಿಳಿಯುತ್ತಿಲ್ಲವಂತೆ. ಮಹಿಳಾ ಕಾರ್ಯದರ್ಶಿ ಕನಿಷ್ಠ ತಿಂಗಳಿಗೆ ನಾಲ್ಕು ಬಾರಿ ತನ್ನ ಜೊತೆ ದೈಹಿಕ ಸಂಪರ್ಕ ಹೊಂದಬೇಕೆಂಬ ಒಪ್ಪಂದಕ್ಕೆ ಸಹಿ ಹಾಕಿಸಿಕೊಂಡಿದ್ದನಂತೆ. ಲಂಚ ಹಗರಣದಂತೆ ಲೈಂಗಿಕ ಹಗರಣವೂ ಆಗಬಾರದೆಂದು ಮುಂದಾಲೋಚನೆ ಇರಬಹುದು.

ದಕ್ಷಿಣ ಕೊರಿಯಾದಲ್ಲಿ ದಂಪತಿಗಳ ಸಮೀಕ್ಷೆ ನಡೆಯಿತು. ಮೂರನೇ ಒಂದರಷ್ಟು ದಂಪತಿ ದಿನವೊಂದಕ್ಕೆ ಕೇವಲ ಅರ್ಧ ಗಂಟೆ ಮಾತ್ರ ಪರಸ್ಪರ ಮಾತನಾಡಿಕೊಳ್ಳುತ್ತಾರಂತೆ. ಶೇಕಡಾ 10ರಷ್ಟು ದಂಪತಿ 10 ನಿಮಿಷ ಮಾತ್ರ ಮಾತನಾಡಿಕೊಳ್ಳುತ್ತಾರಂತೆ, ಅದೂ ಊಟದ ಸಮಯದಲ್ಲಿ ಮಾತ್ರ. ಮದುವೆಯಾದ ನಂತರ ಮಾತನಾಡುವ ಹಕ್ಕು ಹೆಂಡತಿಗೆ ಹೋಗುವುದರಿಂದ ಗಂಡನಿಗೆ ಕೇಳಿಸಿಕೊಳ್ಳುವ ಹಕ್ಕು ಮಾತ್ರ ಉಳಿಯುವುದು ಸಹಜ ಬಿಡಿ.



ಇದು ಸಿಂಗಾಪುರದಲ್ಲಿರುವ 'ಕ್ಯಾಟ್ ಕೆಫೆ'. ಬೆಕ್ಕುಗಳಿಗೆ ಕಾಫಿ ಹೋಗಲಿ, ಹಾಲನ್ನೂ ಕುಡಿಯಲು ಬಿಡುವುದಿಲ್ಲವಂತೆ. ಬದಲಾಗಿ ಗ್ರಾಹಕರು ಕಾಫಿ ಕುಡಿಯುತ್ತ ಬೆಕ್ಕುಗಳ ಜೊತೆ ಆಟವಾಡುತ್ತ ಮಾಲೀಕರಿಗೆ ಟಿಪ್ಸ್ ಮೇಲೆ ಟಿಪ್ಸ್ ಕೊಡುತ್ತ... ಪರ್ಸ್ ಖಾಲಿ ಮಾಡಿಕೊಂಡರಾಯ್ತು. ಈ ಬೆಕ್ಕುಗಳನ್ನು ಮಾಲೀಕರು ಕೊಂಡು ತಂದವುಗಳಲ್ಲ, ಬೀದಿಯಲ್ಲಿ ಅನಾಥವಾಗಿ ಓಡಾಡುತ್ತಿದ್ದವುಗಳನ್ನು ತಂದಿಟ್ಟುಕೊಂಡು ದುಡ್ಡಿಗೆ ದುಡ್ಡು, ಸಮಾಜ ಸೇವೆಗೆ ಸಮಾಜ ಸೇವೆ ಎಂದು ದುಪ್ಪಟ್ಟು ಬೀಗುತ್ತಿದ್ದಾರೆ.

ತಗಡಿನ ಡಬ್ಬಿಯಲ್ಲಿ ಸ್ಥಳೀಯವಾಗಿ ಮಾಡಿದ ಎಫ್‌ಎಂ ರೇಡಿಯೋ. 'ಕಮಿಂಗ್ ಸೂನ್ ಮೋದಿ ರಾಜ್' ಎಂಬ ಹೆಸರಿನ ಇದನ್ನು ಅಹ್ಮದಾಬಾದ್‌ನಲ್ಲಿ ತಯಾರಿಸಿ ಬಿಕರಿ ಮಾಡಲಾಗುತ್ತಿದೆ. ಎಂಪಿ3 ಪ್ಲೇಯರ್ ಹಾಗೂ ಪೆನ್‌ಡ್ರೈವ್ ಜಾಗ ಹೊಂದಿದೆ. ಮೋದಿ ಹೆಸರಿನಲ್ಲಿ ಕಾಸು ಮಾಡುವ ಈ ರೇಡಿಯೊ ಮೋಡಿ ಮುಂದಿನ ಚುನಾವಣೆಯವರೆಗೆ ಇರಬಹುದು.






ಅಮೆರಿಕಾದ ಕೆರೊಲಿನಾದ ರೀಪರ್ ಮೆಣಸಿನಕಾಯಿಗಳಿವು. ಬಾಯಲ್ಲಿಟ್ಟು ಕಡಿದರೆ ಸಾಕು, ಕಣ್ಣು, ಮೂಗು, ಬಾಯಲ್ಲಿ ನೀರು ಸುರಿಸುತ್ತ ಚೀರಾಡಬೇಕು. ನುಂಗಿದರಂತೂ ಹೊಟ್ಟೆಯೊಳಗೆ ಬೆಂಕಿ ಬಿದ್ದಂತಾಗಿ ಶೌಚಾಲಯದಲ್ಲೇ ನಲ್ಲಿಯ ನೀರು ಬಂದ್ ಆಗುವವರೆಗೂ ಕುಳಿತಿರಬೇಕು. ಅಷ್ಟು ಖಾರ. ಜಗತ್ತಿನಲ್ಲೇ ಅತಿ ಖಾರದ ಮೆಣಸಿನಕಾಯಿ ಎಂಬ ಬಿರುದು ಹೊತ್ತು ಈಗ ಗಿನ್ನೆಸ್ ಪುಸ್ತಕ ಸೇರಿ ಕುಳಿತಿದೆ. ದಾಖಲೆಗೆ ಸೇರಿಸುವವರು ಅದು ಹೇಗೆ ಪರೀಕ್ಷೆ ಮಾಡಿದರೋ!